ads-rcs-ka@nic.in

ಸಹಕಾರ ಸಂಘಗಳ ನಿಬಂಧಕರ ಕಛೇರಿ.
ಕರ್ನಾಟಕ ರಾಜ್ಯ, ಬೆಂಗಳೂರು_52.

# ಕರ್ನಾಟಕ ಸರ್ಕಾರ

**(ಸಹಕಾರ ಇಲಾಖೆ)**

## ಸಹಕಾರ ಸಂಘಗಳ ನಿಬಂಧಕರ ಕಛೇರಿ, ನಂ.1, ಅಲಿ ಆಸ್ಕರ್ ರಸ್ತೆ, ಬೆಂಗಳೂರು –52

ಸಂಖ್ಯೆ: ಸಿಬ್ಬಂದಿ/67/ಇಜಿಸಿ/2017-18 ದಿನಾಂಕ: 26-06-2019

**ವಿಷಯ** ಸಿವಿಲ್ ಅಪೀಲು ಸಂ. 2368/2011 ಮತ್ತು ಇತರೆ ಸಿವಿಲ್ ಪ್ರಕರಣಗಳಲ್ಲಿ ದಿನಾಂಕ: 10-05-2019 ರಂದು ಮಾನ್ಯ ಸರ್ವೋಚ್ಚ ನ್ಯಾಯಲಯವು ನೀಡಿದ ನಿರ್ದೇಶನದಂತೆ, ಸಹಕಾರ ಇಲಾಖೆಯ ಸಹಕಾರ ಸಂಘಗಳ ನಿಬಂಧಕರ ಕಛೇರಿ ವ್ಯಾಪ್ತಿಗೆ ಸಂಬಂಧಿಸಿದಂತೆ, ಹೈದರಾಬಾದ್-ಕರ್ನಾಟಕ ಸ್ಥಳೀಯ ವೃಂದದ ಸಹಕಾರ ಸಂಘಗಳ ಸಹಾಯಕ ನಿಬಂಧಕರ ವೃಂದದ ಅಂತಿಮ ಜೇಷ್ಟತಾ ಪಟ್ಟಿಯನ್ನು ಪ್ರಕಟಿಸುವ ಬಗ್ಗೆ

**ಉಲ್ಲೇಖ**

1) ಈ ಕಛೇರಿ ಮಾರ್ಪಾಡು ಅಧಿಸೂಚನೆ.ಸಂ.ಸಿಬ್ಬಂದಿ/46/ಇಜಿಸಿ/2015-16 ದಿನಾಂಕ: 27-01-2016
2) ಈ ಕಛೇರಿ ಸಮ ಅಧಿಸೂಚನೆ. ದಿನಾಂಕ: 16-04-2018
3) ಮಾನ್ಯ ಸರ್ವೋಚ್ಚ ನ್ಯಾಯಾಲಯವು ಸಿವಿಲ್ ಅಪೀಲು.ಸಂ. 2368/2011 ರಲ್ಲಿ ದಿನಾಂಕ: 9-02-2017 ರಲ್ಲಿ ನೀಡಿದ ತೀರ್ಪು
4) ಸರ್ಕಾರದ ಆದೇಶ.ಸಂ. ಸಿ.ಆ.ಸು.ಇ/186/ಎಸ್ಆರ್ಎಸ್2018, ಬೆಂಗಳೂರು ದಿನಾಂಕ: 27-02-2019 ಹಾಗೂ 15-05-2019
5) ಈ ಕಛೇರಿ ಸಮ ಅಧಿಸೂಚನೆ.ಸಂ. ದಿನಾಂಕ: 01-06-2019

## –;ಅಧಿಸೂಚನೆ:–

ಭಾರತೀಯ ಸಂವಿಧಾನದ ಅನುಚ್ಛೇದ 371(ಜೆ) ಅನುಷ್ಠಾನಕ್ಕೆ ಸಂಬಂಧಿಸಿದಂತೆ ಕರ್ನಾಟಕ ಸಾರ್ವಜನಿಕ ಉದ್ಯೋಗ ( ಹೈದರಾಬಾದ್-ಕರ್ನಾಟಕ ಪ್ರದೇಶದ ನೇಮಕಾತಿಯಲ್ಲಿ ಮೀಸಲಾತಿ) ಆದೇಶ 2013 ರ 13 ನೇ ಕಂಡಿಕೆಗಳಗೆ ಅನುಸಾರವಾಗಿ ಸಹಕಾರ ಇಲಾಖೆಯ ಸಹಕಾರ ಸಂಘಗಳ ನಿಬಂಧಕರ ಕಛೇರಿ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಗ್ರೂಫ್ 'ಎ' 'ಬಿ, 'ಸಿ, 'ಡಿ, ವೃಂದದ ಹುದ್ದೆಗಳ ಪದೋನ್ನತಿ ಮತ್ತು ನೇಮಕಾತಿ ಸಲುವಾಗಿ ಸ್ಥಳೀಯ ವೃಂದದಲ್ಲಿ 'ಎ' 'ಬಿ' ಹುದ್ದೆಗಳಿಗೆ ಶೇ 75 ಗ್ರೂಫ್ 'ಸಿ' ಹುದ್ದೆಗೆ ಶೇ 80 ಹಾಗೂ ಡಿ ವೃಂದದ ಹುದ್ದೆಗೆ ಶೇ 85 ರ ಪ್ರಮಾಣದಲ್ಲಿ ಹಾಗೂ ಸಹಕಾರ ಸಂಘಗಳ ನಿಬಂಧಕರ ಕಛೇರಿಯನ್ನು ರಾಜ್ಯ ಮಟ್ಟದ ಕಛೇರಿಯೆಂದು ಗುರುತಿಸಿ ಶೇ 8 ರ ಪ್ರಮಾಣದಲ್ಲಿ ಹುದ್ದೆಗಳನ್ನು ಮೀಸಲಿರಿಸಲಾಗಿರುತ್ತದೆ. ಮೀಸಲಿಟ್ಟ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ/ನೌಕರರಿಂದ ಅಭಿಮತ ಸ್ವೀಕರಿಸಿ ಸದರಿ ಅಧಿಕಾರಿ/ನೌಕರರನ್ನು ಸ್ಥಳೀಯ ವೃಂದಕ್ಕೆ ಹಂಚಿಕೆ ಮಾಡಿ ಜೇಷ್ಟತಾ ಪಟ್ಟಿಯನ್ನು ಉಲ್ಲೇಖ(1) ರನ್ವಯ ಅಧಿಸೂಚನೆಯನ್ನು ಹೊರಡಿಸಲಾಗಿರುತ್ತದೆ.

ಆದರೆ ಬಿ.ಕೆ. ಪವಿತ್ರ ಮತ್ತು ಇತರರು //ವಿರುದ್ಧ// ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ ಪ್ರಕರಣದ ರಿಟ್ ಅರ್ಜಿ ಸಂ. ಸಂಖ್ಯೆ: 2368/2011 ದಿ: 09-02-2017ರ ತೀರ್ಪಿನನುಸಾರ,ಎಲ್ಲಾ ಅಧಿಕಾರಿ/ನೌಕರರ ಜೇಷ್ಟತಾ ಪಟ್ಟಿಯನ್ನು ದಿನಾಂಕ: 27-04-1978 ರಿಂದ ಅನ್ವಯವಾಗುವಂತೆ ಪರಿಷ್ಕರಿಸುವಂತೆ ಸೂಚಿಸಿ ಕರ್ನಾಟಕ (ರಾಜ್ಯದ ಸಿವಿಲ್ ಸೇವೆಗಳಲ್ಲಿನ ಹುದ್ದೆಗಳಿಗೆ) ಮೀಸಲಾತಿ ಆಧಾರದ ಮೇಲೆ ಬಡ್ತಿ ಹೊಂದಿದ

ಸರ್ಕಾರಿ ನೌಕರರ ಜೇಷ್ಠತೆಯ ನಿರ್ಧರಣಾ ಅಧಿನಿಯಮ 2002 ರ ಪ್ರಕರಣ 3 ಮತ್ತು 4 ಪ್ರಕರಣಗಳನ್ನು ಅನೂರ್ಜಿತಗೊಳಿಸಿದ ಹಿನ್ನಲೆಯಲ್ಲಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಸೇವಾ ನಿಯಮಗಳು) ವಿಭಾಗದ ಸರ್ಕಾರದ ಆದೇಶ.ಸಂ: ಸಿಆಸುಇ 182/ಎಸ್‌ಆರ್‌ಎಸ್2011, ದಿನಾಂಕ: 06-05-2017 ರಲ್ಲಿ ನೀಡಿರುವ ಮಾರ್ಗಸೂಚಿಗಳನ್ವಯ ಹೈದರಾಬಾದ್-ಕರ್ನಾಟಕ ಸ್ಥಳೀಯ ವೃಂದದ ಜೇಷ್ಠತಾ ಪಟ್ಟಿಯನ್ನು ಪರಿಷ್ಕರಿಸಿ ಉಲ್ಲೇಖ(2) ರ ಅಧಿಸೂಚನೆಯನ್ವಯ ಪ್ರಕಟಿಸಲಾಗಿರುತ್ತದೆ.

ಪ್ರಸ್ತುತ ಸರ್ಕಾರದ ಆದೇಶ.ಸಂ. ಸಿ.ಆ.ಸು.ಇ/186/ಎಸ್.ಅರ್.ಎಸ್.018/ಬೆಂಗಳೂರು,ದಿ: 27-02-2019 ಹಾಗೂ 15-05-2019 ಗಳಲ್ಲಿ ಕರ್ನಾಟಕ (ರಾಜ್ಯದ ಸಿವಿಲ್ ಸೇವೆಗಳಲ್ಲಿನ ಹುದ್ದೆಗಳಿಗೆ) ಮೀಸಲಾತಿ ಆಧಾರದ ಮೇಲೆ ಬಡ್ತಿ ಹೊಂದಿರುವ ಸರ್ಕಾರಿ ನೌಕರರಿಗೆ ತತ್ಪರಿಣಾಮವಾದ ಜೇಷ್ಠತೆಯನ್ನು ವಿಸ್ತರಿಸುವ ಅಧಿನಿಯಮ, 2017 ರನ್ನು ಅನುಷ್ಠಾನಗೊಳಿಸುವುದಕ್ಕೆ ಸಂಬಂಧಿಸಿದಂತೆ ನಿರ್ದೇಶನಗಳನ್ನು ನೀಡಲಾಗಿರುತ್ತದೆ.

ಸಹಕಾರ ಇಲಾಖೆಯ ಸಹಕಾರ ಸಂಘಗಳ ನಿಬಂಧಕರ ಕಛೇರಿ ವ್ಯಾಪ್ತಿಗೆ ಸಂಬಂಧಿಸದಂತೆ, ಉಲ್ಲೇಖ(2) – ರನ್ವಯ ಹೈದರಾಬಾದ್-ಕರ್ನಾಟಕ ಸ್ಥಳೀಯ ವೃಂದದ ಸಹಕಾರ ಸಂಘಗಳ ಸಹಾಯಕ ನಿಬಂಧಕರ ವೃಂದದ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸಿದ್ದು, ಸದರಿ ಜೇಷ್ಠತಾ ಪಟ್ಟಿಯನ್ನು ಸರ್ಕಾರವು ನೀಡಿರುವ ದಿನಾಂಕ: 06-05-2017 ಮಾರ್ಗಸೂಚಿಗಳನ್ವಯ ಹೈದರಾಬಾದ್-ಕರ್ನಾಟಕ ಸ್ಥಳೀಯ ವೃಂದದ ಜೇಷ್ಠತಾ ಪಟ್ಟಿಯನ್ನು ಪುನಾರವಾಲೋಕಿಸಿ ಪ್ರಕಟಿಸಿದ್ದು, ಸದರಿ ಜೇಷ್ಠತಾ ಪಟ್ಟಿಯಲ್ಲಿ ಯಾವುದೇ ಬದಲಾವಣೆಗಳು ಇರುವುದಿಲ್ಲ

ಆದುದರಿಂದ ಸಹಕಾರ ಇಲಾಖೆಯ ಸಹಕಾರ ಸಂಘಗಳ ನಿಬಂಧಕರ ಕಛೇರಿ ವ್ಯಾಪ್ತಿಯ ಹೈದರಾಬಾದ್-ಕರ್ನಾಟಕ ಸ್ಥಳೀಯ ವೃಂದದ ಸಹಕಾರ ಸಂಘಗಳ ಸಹಾಯಕ ನಿಬಂಧಕರ ವೃಂದದ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ಯಥಾವತ್ತಾ ಪ್ರಕಟಿಸಿ ಅಧಿಕಾರಿ/ನೌಕರರರುಗಳಿಗೆ ಸದರಿ ಜೇಷ್ಠತಾ ಪಟ್ಟಿಗೆ ಸಂಬಂಧಿಸಿದಂತೆ ಆಕ್ಷೇಪಣೆಗಳು ಏನಾದರು ಇದ್ದಲ್ಲಿ 15 ದಿನದೊಳಗಾಗಿ ಸಲ್ಲಿಸಲು ಉಲ್ಲೇಖ (4) ರ ಅಧಿಸೂಚನೆಯಲ್ಲಿ ತಿಳಿಸಲಾಗಿತ್ತು. ಸದರಿ ಜೇಷ್ಠತಾ ಪಟ್ಟಿಗೆ ಸಂಬಂಧಿಸಿದಂತೆ ಯಾವುದೇ ಆಕ್ಷೇಪಣೆಗಳು ಬಂದಿಲ್ಲದೇ ಇರುವುದರಿಂದ ಸಹಕಾರ ಸಂಘಗಳ ಸಹಾಯಕ ನಿಬಂಧಕರ ವೃಂದದ ಅಂತಿಮ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸಲಾಗಿದೆ.

ಸಹಕಾರ ಸಂಘಗಳ ನಿಬಂಧಕರು
ಕರ್ನಾಟಕ ರಾಜ್ಯ, ಬೆಂಗಳೂರು

**ಜೇಷ್ಠತಾ ಪಟ್ಟಿಯನ್ನು ಕಳುಹಿಸುತ್ತಾ ತಮ್ಮ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ನೌಕರರಿಗೆ ತಲುಪಿಸುವುದು ಹಾಗೂ ಸೂಚನಾ ಫಲಕದಲ್ಲಿ ಪ್ರಕಟಿಸುವುದು**

1) **ಸಹಕಾರ ಸಂಘಗಳ ಜಂಟಿ ನಿಬಂಧಕರು ಕಲಬುರಗಿ ಪ್ರಾಂತ, ಕಲಬುರಗಿ**
2) **ಸಹಕಾರ ಸಂಘಗಳ ಉಪ ನಿಬಂಧಕರು ಬಳ್ಳಾರಿ/ರಾಯಚೂರು/ಯಾದಗಿರಿ/ಕಲಬುರಗಿ/ಕೊಪ್ಪಳ /ಬೀದರ್**
3) **ಸಹಕಾರ ಸಂಘಗಳ ಸಹಾಯಕ ನಿಬಂಧಕರು ರಾಯಚೂರು/ಸಿಂಧನೂರು /ಕೊಪ್ಪಳ/ಬಳ್ಳಾರಿ/ಹೊಸಪೇಟೆ/ಯಾದಗಿರಿ/ ಕಲಬುರಗಿ/ಸೇಡಂ/ಬೀದರ್**
4) **ಸಹಕಾರ ಸಂಘಗಳ ಸಹಾಯಕ ನಿಬಂಧಕರು (ಗಣಕ ಕೋಶ ಇವರಿಗೆ ಕಳುಹಿಸುತ್ತಾ, ಜಾಲತಾಣಗಳಲ್ಲಿ ಪ್ರಕಟಿಸಲು ಸೂಚಿಸಿದೆ.**

**ಸಿವಿಲ್ ಅಪೀಲ್ ಸಂ: 2368/2011 ರ ಪ್ರಕರಣದಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯದ ದಿನಾಂಕ: 10-05-2019 ರ ಆದೇಶದ ಹಿನ್ನಲೆಯಲ್ಲಿ ಅಧಿಸೂಚನೆ.ಸಂ: ಸಿಬ್ಬಂದಿ/67/ಇಸಿಎಸ್-1/2017-18 ದಿನಾಂಕ: 06-2019 ರನ್ವಯ ದಿನಾಂಕ: 01-01-2019 ರಲ್ಲಿದಂತೆ ಸಕಾರ ಸಂಘಗಳ ಸಹಾಯಕ ನಿಬಂಧಕರ ವೃಂದದ ಅಂತಿಮ ಜೇಷ್ಠತಾ ಪಟ್ಟಿ:**

| ಕ್ರ.ಸಂ | ಹಿಂದಿನ ಜೇಷ್ಠ ತಾಪ್ಟಿಂಯಲ್ಲಿದ ಕ್ರಮಾಂಕ | ಹೆಸರು | ಪೋಷಕ ವೃಂದದ ಕ್ರಮಾಂಕ ಸಹಕಾರ ಅಭಿವೃದ್ಧಿ ಅಧಿಕಾರಿ ವೃಂದದ | ಪ.ಜಾ | ಜನ್ಮ ದಿನಾಂಕ/ನೇಮಕಾತಿ ಪದೋನ್ನತಿ ಹೊಂದಿದ ದಿನಾಂಕ | ಸೇವೆಗೆ ಸೇರಿದ ದಿನಾಂಕ | ವಾಸ್ತವ ಪದೋನ್ನತಿ ಹೊಂದಿದ ದಿನಾಂಕ | ಅರ್ಹತಾ ದಿನಾಂಕ | ಷರಾ |
|---|---|---|---|---|---|---|---|---|---|
| 1 | 1 | ಸೈಯದ್ ಮಹಮ್ಮದ್ ಆಲಿ | - | | 5-11-1955 | 03-12-1976 | 28-12-2006 | 24-08-2009 | ವಯೋನಿವೃತಿ |
| 2 | 2 | ಸೂರ್ಯವಂಶಿ | - | | 21-03-1956 | 09-09-1985 | 27-02-2013 | 27-02-2013 | ವಯೋನಿವೃತಿ |
| 3 | 3 | ಪಂಡರಿ ಚೌಹಾಣ್ | - | ಪ.ಜಾ | 26-04-1956 | 31-05-1984 | 27-02-2013 | 27-02-2013 | ವಯೋನಿವೃತಿ |
| 4 | 4 | ಗುರುಮೂರ್ತಿ ಸ್ವಾಮಿ | - | | 12-05-1957 | 07-04-1986 | 27-02-2013 | 27-02-2013 | ವಯೋನಿವೃತಿ |
| 5 | 5 | ಇಕ್ಬಾಲ್ ಅಹಮದ್ | - | | 05-08-1957 | 07-06-1984 | 12-09-2014 | 12-09-2014 | ವಯೋನಿವೃತಿ |
| 6 | 6 | ನಾಗೇಂದ್ರ ಮಾಖಾ | - | | 22-07-1959 | 31-05-1984 | 12-09-2014 | 12-09-2014 | |
| 7 | 7 | ಬಿ. ಮಹೇಶ್ವರ | - | | 20-01-1957 | 06-06-1984 | 12-09-2014 | 12-09-2014 | ವಯೋನಿವೃತಿ |
| 8 | 8 | ಸಿದ್ನೆಕೊಪ್ಪ | - | | 01-06-1960 | 31-05-1984 | 12-09-2014 | 12-09-2014 | |
| 9 | 9 | ಕಂಠಿ ಶಂಕರ | - | ಪ.ಜಾ | 05-04-1955 | 14-09-1977 | - | - | ವಯೋನಿವೃತಿ |
| | | ಕೊಟ್ರೇಶಿ ಜಂಗಲಿ | 06 | ಪ.ಪಂ | 08-02-1956 | 18-01-1989 | 31-12-2015 | | ಕ್ರ.ಸಂ. 12 ರನ್ನು |

| | | | | | | | | | |
|---|---|---|---|---|---|---|---|---|---|
| | | | | | | | | | ನೋಡುವುದು |
| **10** | 10 | ಎಲ್. ತಿಪ್ಪೇಸ್ವಾಮಿ | 02 | | 8-12-1959 | 03-08-1987 | 31-12-2015 | 31-12-2015 | |
| **11** | 11 | ನಿಂಗಪ್ಪಗೌಡ | 03 | | 01-06-1957 | 09-07-1984 | 31-12-2015 | 31-12-2015 | ವಯೋನಿವೃತಿ |
| **12** | 12 | ಕೊಟ್ರೇಶಿ ಜಂಗಲಿ | – | ಪ.ಪಂ | 08-02-1956 | 18-01-1989 | 31-12-2015 | – | ವಯೋನಿವೃತಿ |

**ಸಹಕಾರ ಸಂಘಗಳ ನಿಬಂಧಕರು**
**ಕರ್ನಾಟಕ ರಾಜ್ಯ, ಬೆಂಗಳೂರು**